SEPTEMBER 18, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ರೋಲ್ಸ್ ರಾಯ್ಸ್ ನ, ಅತಿದೊಡ್ಡ ಇಂಜಿನಿಯರಿಂಗ್ ಮತ್ತು ಸಾಮರ್ಥ್ಯ ಕೇಂದ್ರದ ಸ್ಥಾಪನೆಯೊಂದಿಗೆ, ಕರ್ನಾಟಕದ ಏರೋಸ್ಪೇಸ್ ವಲಯದಲ್ಲಿ ಮತ್ತೊಂದು ಜಾಗತಿಕ ಮೈಲಿಗಲ್ಲು ಸಾಧಿಸಲಾಗಿದೆ ಎಂದು, ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ, ಸಂತಸ ವ್ಯಕ್ತ ಪಡಿಸಿದ್ದಾರೆ. ಬೆಂಗಳೂರಿನಲ್ಲಿ ರೋಲ್ಸ್‌ರಾಯ್ಸ್ ನ, ಅತಿದೊಡ್ಡ Global Engineering & Capability Centre ಉದ್ಘಾಟಿಸಿ, ಅವರು ಮಾತನಾಡಿದರು. ರಾಜ್ಯದ ಆವಿ ಷ್ಕಾರ ಮತ್ತು ಪ್ರತಿಭೆಗಳು, ವಿಶ್ವವನ್ನು ಮುನ್ನಡೆಸುತ್ತಿರುವುದು, ರಾಜ್ಯಕ್ಕೆ ಹೆಮ್ಮೆಯ ಸಂಗತಿ. 400ಕ್ಕೂ ಹೆಚ್ಚು Global Engineering & Capability Centre ಗಳೊಂದಿಗೆ, ಕರ್ನಾಟಕ, ಜಗತ್ತಿನ 'ಟಾಪ್ ಥ್ರೀ' ಏರೋಸ್ಪೇಸ್ ಕೇಂದ್ರಗಳಲ್ಲಿ ಒಂದಾಗಿದೆ ಎಂದರು.

<><><>

ಕಲ್ಯಾಣ ಕರ್ನಾಟಕದ, ಕಲಬುರಗಿ ನಗರ ಬಸ್ ನಿಲ್ದಾಣದ ಆವರಣದಲ್ಲಿ, ರಾಜ್ಯಾದ್ಯಂತ ಏಕಕಾಲಕ್ಕೆ, 500 ಕೆ.ಎಂ.ಎಫ್. ನಂದಿನಿ ಹಾಲಿನ ಉತ್ಪನ್ನಗಳ ಮಾರಾಟ ಮಳಿಗೆಗಳನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ನಂದಿನಿ ಬ್ರ್ಯಾಂಡ್, ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ, ತನ್ನ ಗುಣಮಟ್ಟದ ಉತ್ಪನ್ನಗಳ ಮಾರಾಟವನ್ನು ವಿಸ್ತರಿಸಿಕೊಂಡು, ದೇಶದಲ್ಲೇ ಉತ್ಕೃ ಷ್ಟ ಹಾಗೂ ನಂಬಿಕಾರ್ಹ ಹಾಲಿನ ಉತ್ಪನ್ನಗಳ ಸಂಸ್ಥೆಯಾಗಿ ಬೆಳೆಯುತ್ತಿದೆ. ಕನ್ನಡಿಗನಾಗಿ ತಮಗೆ ಹೆಮ್ಮೆ ತಂದಿದೆ ಎಂದು, ಎಕ್ಸ್ ಮಾಧ್ಯಮದಲ್ಲಿ ಅಭಿನಂದಿಸಿದ್ದಾರೆ.

<><><>

ಕೊಡಗಿನ ನಲ್ಕೇರಿ ಗ್ರಾಮದಲ್ಲಿ, DFS_India ವತಿಯಿಂದ, ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನದ ಅಂಗವಾಗಿ, ಪ್ರಧಾನಮಂತ್ರಿ ಜೀವನ ಜ್ಯೋತಿ ವಿಮೆ, ಪ್ರಧಾನಮಂತ್ರಿ ಸುರಕ್ಷಾ ವಿಮೆ ಮತ್ತು ಅಟಲ್ ಪಿಂಚಣಿ ಯೋಜನೆಗಳ ಕುರಿತು, ಅಗ್ರಣಿ ಬ್ಯಾಂಕ್ ಪ್ರಬಂಧಕರು ಗ್ರಾಮಸ್ಥರಿಗೆ ಮಾಹಿತಿ ನೀಡಿ, ಯೋಜನೆಗಳಡಿ ಹೆಸರು ನೊಂದಾಯಿಸಿದರು. ಆರ್ಥಿಕ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳ, ಹಣಕಾಸು ಸೇರ್ಪಡೆ ಸಂಪೂರ್ಣತಾ ಅಭಿಯಾನ, ಈ ತಿಂಗಳ 30ರ ವರೆಗೆ, ರಾಜ್ಯಾದ್ಯಂತ ಜರುಗಲಿದೆ.

<><><>

ಕೇಂದ್ರದ ಸರಕು ಮತ್ತು ಸೇವಾ ತೆರಿಗೆ ಮಂಡಳಿ ಶಿಫಾರಸಿನಂತೆ, ಪರಿಷ್ಕೃತ ಸರಕು ಮತ್ತು ಸೇವಾ ತೆರಿಗೆ, ಅಧಿನಿಯಮ, ಈ ತಿಂಗಳ 22ನೇ ತಾರೀಖಿನಿಂದ, ಜಾರಿಗೊಳ್ಳಲಿದೆ. ಸೈಕಲ್ ಮತ್ತು ಉಡುಪುಗಳ ಜಿಎಸ್‌ಟಿ ಶೇಕಡ 12 ರಿಂದ ಶೇಕಡ 5ಕ್ಕೆ ಇಳಿಸುವ ಪ್ರಸ್ತಾವದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬಾಗಲಕೋಟೆ ಜಿಲ್ಲೆ, ಜಮಖಂಡಿ ಉಪ ವಿಭಾಗದ, ರಬಕವಿ–ಬನಹಟ್ಟಿಯ ಯುವ ವಸ್ತ್ರೋದ್ಯಮಿ, ಕಮಲಾ ಚೇತನ ಕಾಳೆ.

<><><>

ಕಮಲಾ ಕಾಳೆ ಧ್ವನಿ 45 ಸೆಕೆಂದುಗಳು

<><><>

ಕೃಷಿಯಲ್ಲಿ ಜಿ.ಎಸ್.ಟಿ ತರ್ಕಬದ್ಧ ಗೊಳಿಸುವಿಕೆ, ರೈತ ಕೇಂದ್ರಿತ ಸುಧಾರಣೆಯಾಗಿದೆ. ರಸ ಗೊಬ್ಬರ, ಯಂತ್ರೋಪಕರಣ, ಹೈನುಗಾರಿಕೆ ಮತ್ತು ಪಶು ಸಾಕಣೆ, ಜಲಚರ ಪೋಷಣೆ, ಹಾಗೂ ಲಾಜಿಸ್ಟಿಕ್ಸ್ ವಲಯಗಳಲ್ಲಿ, ವೆಚ್ಚ ಕಡಿಮೆ ಮಾಡುವುದರಿಂದ, ರೈತರ ಆದಾಯ ಹೆಚ್ಚಿಸಿ, ಸಹಕಾರಿ ಸಂಘಗಳನ್ನು ಬಲಪಡಿಸಲಿದೆ ಎಂದು, ಪಿಐಬಿ ವರದಿ ತಿಳಿಸಿದೆ.

<><><>

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಚಲನಚಿತ್ರ, "ಚಲೋ ಜೀತೇ ಹೈ", ಶ್ರೀ ಸ್ವಾಮಿ ವಿವೇಕಾನಂದರ ತತ್ವಜ್ಞಾನ, "ಬಸ್ ವಹಿ ಜೀತೇ ಹೈ, ಜೋ ದೂಸ್ರೋ ಕೆ ಲಿಯೇ ಜೀತೇ ಹೈ", ಇತರರಿಗಾಗಿ ಬದುಕುವವರು ಮಾತ್ರ, ನಿಜವಾಗಿಯೂ ಯಶಸ್ವಿಯಾಗುತ್ತಾರೆ.. ಎಂಬ, ಸಿದ್ಧಾಂತಕ್ಕೆ ಗೌರವ ಸಲ್ಲಿಸುವ ಚಿತ್ರವಾಗಿದೆ. ರಾಜ್ಯಾದ್ಯಂತ ಅಕ್ಟೋಬರ್ 2 ಗಾಂಧಿ ಜಯಂತಿ ವರೆಗೆ, ವಿಶೇ ’ ಮರು ಪ್ರದರ್ಶನ, ರಾಜ್ಯದ 45 ಚಿತ್ರಮಂದಿರಗಳಲ್ಲಿ, ಒಟ್ಟು 315 ಪ್ರದರ್ಶನಗಳು ಆಯೋಜನೆಗೊಂಡಿವೆ. 'ಚಲೋ ಜೀತೇ ಹೈ: ಸೇವಾ ಕಾ ಸಮ್ಮಾನ್' ಉಪಕ್ರಮದಡಿ, ಸಮಾಜದ ಮೂಕ ವೀರರು ಎಂದು ಪರಿಗಣಿತವಾದ, ಕಾವಲುಗಾರರು, ಸ್ವಚ್ಛತಾ ಸೇನಾನಿಗಳು, ಚಾಲಕರು, ಸಿಪಾಯಿ ಮುಂತಾದ, ದೈನಂದಿನ ಜೀವನದ ಸುಗಮ ಕಾರ್ಯನಿರ್ವಹಣೆಗೆ, ಸದ್ದಿಲ್ಲದೆ ಕೊಡುಗೆ ನೀಡುವ ಇತರರನ್ನು ಗೌರವಿಸಲಾಗುತ್ತದೆ. ಈ ಸಮಾರಂಭ ವಿದ್ಯಾರ್ಥಿಗಳು, 'ಸೈಲೆಂಟ್ ಹೀರೋಸ್' ಜೊತೆ ಚಿತ್ರವನ್ನು ವೀಕ್ಷಿಸಿದ ನಂತರ ನಡೆಯಲಿದೆ. ಯುವ ಮನಸ್ಸುಗಳು ತಮಗಾಗಿ ಮಾತ್ರವಲ್ಲದೆ, ಇತರರ ಸೇವೆಯಲ್ಲಿಯೂ ಬದುಕಲು ಪ್ರೇರೇಪಿಸುತ್ತದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿಯವರ, 75ನೇ ಜನ್ಮದಿನದ ಅಂಗವಾಗಿ, ದೇಶದೆಲ್ಲೆಡೆ ಸೇವಾ ಪರ್ವ ಆಯೋಜಿತವಾಗಿದೆ. ಸೇವಾ ಸಪ್ತಾಹದ ಅಂಗವಾಗಿ, ಧಾರವಾಡ ಸೇರಿದಂತೆ, ರಾಜ್ಯದ 31 ಜಿಲ್ಲೆಗಳಲ್ಲಿ, ಎನ್.ಎಸ್.ಎಸ್., ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಎನ್.ಸಿ.ಸಿ. ಸೇರಿದಂತೆ, ವಿವಿಧ ಸಂಘ ಸಂಸ್ಥೆಗಳ ಸ್ವಯಂಸೇವಕರು ಸೇವಾ ಕಾರ್ಯಗಳಲ್ಲಿ ಪಾಲ್ಗೊಂಡು, ಸಚ್ಛತಾ ಹೀ ಈಶ್ವರ ಅಭಿಯಾನ ಮುನ್ನಡೆಸುತ್ತಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿಯವರ, ಜನ್ಮ ದಿನಾಚರಣೆ ಹಿನ್ನೆಲೆ, 'ಸ್ವಸ್ಥ ನಾರಿ ಸಶಕ್ತ ಪರಿವಾರ ಅಭಿಯಾನ'ದ ನೇರ ಪ್ರಸಾರ, ಧಾರವಾಡ ಜಿಲ್ಲೆ, ಕಲಘಟಗಿ ತಾಲೂಕು ಕಿಮ್ಸ್ ಆಸ್ಪತ್ರೆಯಲ್ಲಿ ಆಯೋಜಿಸಲಾಗಿತ್ತು. ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಪಾಲ್ಗೊಂಡು, ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆ ಅಡಿ, ಇಂದು ಪ್ರಧಾನಮಂತ್ರಿಗಳು 10 ಲಕ್ಷಕ್ಕೂ ಹೆಚ್ಚು ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಯ ಫಲಾನುಭವಿಗಳಿಗೆ ನೇರವಾಗಿ ಹಣವನ್ನು ವರ್ಗಾವಣೆ ಮಾಡಿದರು, ಎಂದರು. ದೇಶದಾದ್ಯಂತ ಮೊದಲ ಮಗುವಿನ ಜನನಕ್ಕೆ 5 ಸಾವಿರ ರೂಪಾಯಿ, ಎರಡನೇ ಹೆಣ್ಣು ಮಗುವಿನ ಜನನಕ್ಕೆ 6 ಸಾವಿರ ರೂಪಾಯಿ ನೀಡಲಾಗುತ್ತಿದೆ ಎಂದು, ಸಚಿವ ಜೋಶಿ ತಿಳಿಸಿದರು.

<><><>

ಮುಂದಿನ 7 ದಿನಗಳ ವರೆಗೆ, ರಾಜ್ಯಾದ್ಯಂತ ಗುಡುಗು ಸಹಿತ, ಜೋರಾದ ಗಾಳಿಯೊಂದಿಗೆ, ಚದುರಿದಂತೆ, ವ್ಯಾಪಕವಾಗಿ ಸಾಧಾರಣ ಮಳೆ ಹಾಗೂ ಅಲ್ಲಲ್ಲಿ ಭಾರಿ ಮಳೆ ನಿರೀಕ್ಷಿಸಲಾಗಿದೆ. ಇನ್ನುಳಿದ ದಿನಗಳಲ್ಲಿ ಮಳೆ ಚಟುವಟಿಕೆ ಕಡಿಮೆಯಾಗುವ ಸಾಧ್ಯತೆಯಿದೆ ಎಂದು, ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರ ತಿಳಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.